# ಹೊಲಸು ಶ್ರೀಮಂತಿಕೆ ಮತ್ತು ಬಡತನದ ಬೇಗೆಯ

# ಎರಡು ಭಾರತಗಳ ಕಟುವಾಸ್ತವ ಬದಲಿಸಲು

**CPI(M)**

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿ

ತಮ್ಮ ನೀತಿಗಳೆಲ್ಲ 'ಅಭಿವೃದ್ಧಿ'ಗಾಗಿ ಎಂದು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಹೇಳಿಕೊಳ್ಳುತ್ತವೆ. ಆ ಅಭಿವೃದ್ಧಿಯಿಂದ ಪ್ರಯೋಜನ ಯಾರಿಗೆ? ತಮ್ಮ ಬೆವರು ಮತ್ತು ದುಡಿಮೆಯಿಂದ ಈ ಅಭಿವೃದ್ಧಿ ಸಾಧ್ಯಮಾಡಿದ ಸ್ತ್ರೀ-ಪುರುಷರಿಗೆ ಅದು ತಲುಪಿದೆಯೆ?

ಸರಕಾರದ ನೀತಿಗಳ ಪರಿಣಾಮವನ್ನು ಅಳೆಯಲು, ಅದು – ಕಾರ್ಮಿಕರು, ರೈತರು, ಬಡವರು, ಮಕ್ಕಳು, ಮಹಿಳೆಯರು, ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಇವರೆಲ್ಲರಿಗೆ – ಒದಗಿಸುವ ಜೀವನದ ಗುಣಮಟ್ಟವೇ ಅತ್ಯುತ್ತಮ ಅಳತೆಗೋಲು. ಕಳೆದ ಎರಡು ದಶಕಗಳ ನೀತಿಗಳಿಗೆ ಈ ಅಳತೆಗೋಲು ಬಳಸಿದರೆ ನಾವು ಏನು ಕಾಣುತ್ತೇವೆ?

ಕೆಲವೇ ಕುಟುಂಬಗಳು ನಿಯಂತ್ರಿಸುವ ದೊಡ್ಡ ಉದ್ಯಮ ಮನೆತನಗಳು, ತಮ್ಮ ಲಾಭವನ್ನು ಹಲವು ಪಟ್ಟು ಹೆಚ್ಚಿಸಿಕೊಂಡಿವೆ. ಭಾರತದ ಅಧಿಕ-ಆದಾಯದ ಮೇಲ್ವರ್ಗಗಳು ತಮ್ಮ ಆದಾಯ ಮತ್ತು ಸಂಪತ್ತನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿಕೊಂಡಿವೆ. ಇದಕ್ಕೆ ವಿರುದ್ಧವಾಗಿ, ಭಾರತದ ಬಹುಸಂಖ್ಯಾತ ಜನತೆಯ ಆದಾಯ ಇದ್ದಲ್ಲೇ ಇದೆ ಅಥವಾ ಇದ್ದ ಬದ್ದ ಭೂಮಿ, ಆದಾಯವನ್ನೂ ಕಳೆದುಕೊಂಡಿದ್ದಾರೆ.

ಅಂಕೆ-ಸಂಖ್ಯೆಗಳು ನಿಜಸ್ಥಿತಿಗೆ ಕನ್ನಡಿ ಹಿಡಿಯುತ್ತವೆ.

## ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ

ದೊಡ್ಡ ಬಂಡವಾಳಶಾಹಿಗಳು ತಮ್ಮ ಸಂಪತ್ತನ್ನು ಭಾರಿಯಾಗಿ ಹೆಚ್ಚಿಸಿಕೊಂಡಿದ್ದಾರೆ.

1990ರಲ್ಲಿ ಟಾಟಾ ಗುಂಪಿನ ಸಂಪತ್ತು ರೂ. 10.9 ಸಾವಿರ ಕೋಟಿ ಇದ್ದಿದ್ದು, 2012–13ರ ಹೊತ್ತಿಗೆ ರೂ. 5.83 ಲಕ್ಷ ಕೋಟಿ ಆಗಿದೆ (ಮೂಲ: ಟಾಟಾ ಗುಂಪಿನ ವೆಬ್ ಸೈಟು), ಅಂದರೆ 22 ವರ್ಷಗಳಲ್ಲಿ 50 ಪಟ್ಟಿಗೂ ಹೆಚ್ಚಾಗಿದೆ. ಅಂಬಾನಿಗಳ ರಿಲಾಯನ್ಸ್ ಗುಂಪಿನ ಆದಾಯ ರೂ. 3.16 ಸಾವಿರ ಕೋಟಿಗಳಿಂದ ರೂ. 5 ಲಕ್ಷ ಕೋಟಿಗೆ ಏರಿದೆ, ಅಂದರೆ ವರ್ಷಗಳಲ್ಲಿ 158 ಪಟ್ಟಿಗೂ ಹೆಚ್ಚಾಗಿದೆ. ಮುಕೇಶ್ ಅಂಬಾನಿಯವರ ರಿಲಾಯನ್ಸ್ ಗುಂಪು ಒಂದೇ ರೂ. 3.62 ಲಕ್ಷ ಕೋಟಿ ಆಸ್ತಿ ಗಳಿಸಿದೆ. ಅನಿಲ್ ಅಂಬಾನಿಯವರ ADAG ಗುಂಪು 1.8 ಲಕ್ಷ ಕೋಟಿ ಆಸ್ತಿ ಸಂಪಾದಿಸಿದೆ. (ಮೂಲ: ಅಂಬಾನಿ ಗುಂಪಿನ ವೆಬ್ ಸೈಟು)

1991 ಮತ್ತು 2012ರ ನಡುವೆ, ಒಟ್ಟು ಆರ್ಥಿಕದಲ್ಲಿ ಸ್ಥಿರ ಬಂಡವಾಳದ ಭಂಡಾರ 4 ಪಟ್ಟು ಆದರೆ, ಖಾಸಗಿ ಕಾರ್ಪೊರೆಟ್ ಕ್ಷೇತ್ರದ ಭಂಡಾರ 9 ಪಟ್ಟು ಆಗಿದೆ. (ಮೂಲ: ಸಿ.ಎಸ್.ಒ., ರಾಷ್ಟ್ರೀಯ ಲೆಕ್ಕಪತ್ರ ಅಂಕೆಸಂಖ್ಯೆ)

ದೇಶದ ಒಟ್ಟು ಉತ್ಪಾದನೆಯ (ಜಿಡಿಪಿ) ಭಾಗವಾಗಿ ಖಾಸಗಿ ಕಂಪನಿಗಳ ಉಳಿತಾಯ ಅಥವಾ ಉಳಿಸಿಕೊಂಡ ಆದಾಯ, ಸ್ವಾತಂತ್ರ್ಯ ಬಂದಾಗಿನಿಂದ 1991 ವರೆಗೆ ಹೆಚ್ಚು ಕಡಿಮೆ ಇಡೀ ಅವಧಿಯಲ್ಲಿ ಶೇ.2ಕ್ಕಿಂತ ಕಡಿಮೆ ಇತ್ತು. ಆದರೆ ಅದು 2007–08 ರ ಹೊತ್ತಿಗೆ ಶೇ. 9.4 ಕ್ಕೇರಿದೆ. ಇದು ಖಾಸಗಿ ಕಾರ್ಪೊರೆಟ್ ಕ್ಷೇತ್ರದ ಭಾರಿಯಾಗಿ ಏರುತ್ತಿರುವ ಲಾಭದ ಸೂಚಕವಾಗಿದೆ.

2014 ಹುರುನ್ ಜಾಗತಿಕ ಶ್ರೀಮಂತರ ಪಟ್ಟಿ ಪ್ರಕಾರ, ಭಾರತದಲ್ಲಿ **70 "ಡಾಲರ್ ಶತಕೋಟ್ಯಾಧಿಪತಿ"ಗಳು** (1 ಬಿಲಿಯ ಅಮೆರಿಕನ್ ಡಾಲರುಗಳು = 100 ಕೋಟಿ ಅಮೆರಿಕನ್ ಅಮೆರಿಕನ್ ಡಾಲರುಗಳು= 6300 ಕೋಟಿ ರೂಪಾಯಿಗಳು, 1 ಡಾಲರು=63 ರೂ. ಎಂದಿಟ್ಟುಕೊಂಡು). 2013ರಲ್ಲಿ "ಡಾಲರ್ ಶತಕೋಟ್ಯಾಧಿಪತಿ"ಗಳ ಸಂಖ್ಯೆ 53 ಇದ್ದು, **ಒಂದೇ ವರ್ಷದಲ್ಲಿ 17 (ಅಂದರೆ ಶೇ.33 ರಷ್ಟು) ಹೆಚ್ಚಾಗಿದೆ.**

ಮುಕೇಶ್ ಅಂಬಾನಿಯಂತಹ ಈ 70 ಡಾಲರ್ ಶತಕೋಟ್ಯಾಧಿಪತಿಗಳ ಒಟ್ಟು ಸಂಪತ್ತು 390 ಶತಕೋಟಿ ಡಾಲರುಗಳು ಅಥವಾ ಸುಮಾರು 24 ಲಕ್ಷ ಕೋಟಿ ರೂ. ಇದು ಭಾರತದ ಜಿಡಿಪಿಯ ಕಾಲು ಭಾಗ ಅಂದರೆ ಕೇವಲ 70 ಉದ್ಯಮಿ ಕುಳಗಳು ದೇಶದ ಕಾಲುಭಾಗದಷ್ಟು ಸಂಪತ್ತು ಹೊಂದಿದ್ದಾರೆ.

ಕೇವಲ 10 ಅತ್ಯಂತ ಶ್ರೀಮಂತ ಶತಕೋಟ್ಯಾಧಿಪತಿಗಳ ಖಾಸಗಿ ಸಂಪತ್ತು ಭಾರತದ ಒಟ್ಟು ಉತ್ಪಾದನೆಯ ಶೇ.6 ರಷ್ಟು ಇದೆ.

ಭಾರತದ ಶತಕೋಟ್ಯಾಧಿಪತಿಗಳ ಒಟ್ಟು ಆಸ್ತಿಪಾಸ್ತಿ 15 ವರ್ಷದಲ್ಲಿ 12 ಪಟ್ಟು ಹೆಚ್ಚಾಗಿದೆ. ಇದು ದೇಶದ ಕಡುಬಡವರ ಬಡತನವನ್ನು ನಿವಾರಿಸಲು ಬೇಕಾದ ಹಣದ ಎರಡು ಪಟ್ಟು.

ಅಷ್ಟೇ ಅಲ್ಲ. ಅವರು ಭಾರೀ ಪ್ರಮಾಣದ ಅಘೋಷಿತ ಸಂಪತ್ತನ್ನು ಸಹ ಹೊಂದಿದ್ದು, ಅದರ ದೊಡ್ಡ ಭಾಗವನ್ನು ದೇಶದ ಹೊರಗೆ ಕಾನೂನುಬಾಹಿರವಾಗಿ ಸಾಗಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದ ಸುಮಾರು ರೂ. 20.92 ಲಕ್ಷ ಕೋಟಿಯಷ್ಟು ಹಣ ದೇಶದಿಂದ ಕಾನೂನುಬಾಹಿರವಾಗಿ ಹೊರಗೆ ಹರಿದಿದೆ ಎಂದು ಭಾರತ ಸರಕಾರ ಪಾರ್ಲಿಮೆಂಟಿನಲ್ಲಿ ಒಪ್ಪಿಕೊಂಡಿದೆ. ಇದರಲ್ಲಿ ಮೊದಲ 60 ವರ್ಷಗಳಲ್ಲಿ (ಅಂದರೆ 1948ರಿಂದ 2008ವರೆಗೆ) ರೂ. 9.64 ಲಕ್ಷ ಕೋಟಿ ಹರಿದು ಹೋಗಿದೆ. ಉಳಿದ ರೂ. 11.28 ಲಕ್ಷ ಕೋಟಿ 2008–2010 ಅವಧಿಯಲ್ಲಿ ಸೋರಿ ಹೋಗಿದೆ ! ಅಂದರೆ ಕೇವಲ ಎರಡು ವರ್ಷಗಳಲ್ಲಿ ದೇಶದಿಂದ ಹೊರಗೆ ಹರಿದು ಹೋದ ಕಪ್ಪು ಹಣದ ಪ್ರಮಾಣ 60ವರ್ಷಗಳಲ್ಲಿ ಸೋರಿ ಹೋದಕ್ಕಿಂತಲೂ ಹೆಚ್ಚು. ಕಪ್ಪು ಹಣದ ಬಗ್ಗೆ ಇತರ ಅಂದಾಜುಗಳು ಸರಕಾರದ ಅಂದಾಜಿನ ಮೂರು ಪಟ್ಟಿಗಿಂತಲೂ ಹೆಚ್ಚು ಇವೆ.

**ಹಾಗಾದರೆ ಜನತೆಯ ಪಾಡು ಏನು ?**

ಈ ಹೊಲಸು ಶ್ರೀಮಂತಿಕೆಗೆ ಒಂದು ಕಡೆಯಾದರೆ, ಇನ್ನೊಂದು ಕಡೆ ಜನಸಮೂಹಗಳ ಬಡತನದ ಬೇಗೆಯ ಬದುಕು ಹೀಗಿದೆ:

- 2011–12 ರಲ್ಲಿ ಶೇ. 80ಕ್ಕಿಂತಲೂ ಹೆಚ್ಚು ಗ್ರಾಮೀಣ ಕುಟುಂಬಗಳ ತಲಾ ಬಳಕೆ ವೆಚ್ಚ ರೂ.50 ಅಥವಾ ಅದಕ್ಕಿಂತಲೂ ಕಡಿಮೆ. ಇದು ಸುಮಾರು ಶೇ. 45 ನಗರಗಳ ಕುಟುಂಬಗಳ ಬಗೆಗೂ ನಿಜ.
- ದೇಶದ ಕಾರ್ಮಿಕರಲ್ಲಿ ಶೇ.93 ಪಾಲು ಯಾವುದೇ ಸಾಮಾಜಿಕ ರಕ್ಷಣೆ ಇಲ್ಲದ ಚಿಲ್ಲರೆ ಕೆಲಸಗಳಲ್ಲಿ ಇದ್ದಾರೆ
- 2011–12 ರಲ್ಲಿ ಗ್ರಾಮೀಣ ಕುಟುಂಬಗಳಲ್ಲಿ ಶೇ. 80 ಮತ್ತು ನಗರಗಳಲ್ಲಿ ಶೇ. 64 ಕುಟುಂಬಗಳು ಕನಷ್ಟ ಕ್ಯಾಲೊರಿ ಅಗತ್ಯಕ್ಕಿಂತ ಕಡಿಮೆ, ಮತ್ತು ಕನಿಷ್ಟ ಪ್ರೋಟಿನ್ ಅಗತ್ಯಕ್ಕಿಂತ ಭಾರೀ ಕಡಿಮೆ ಇರುವ ಆಹಾರ ಸೇವಿಸುತ್ತಾರೆ. ಈ ಭಾರೀ ಬೆಳವಣಿಗೆಯ ವರ್ಷಗಳಲ್ಲಿ ತಲಾ ಕ್ಯಾಲೊರಿ ಸೇವನೆ ಇನ್ನಷ್ಟು ಕಡಿಮೆಯಾಗಿದೆ. ಸತತ ಹಸಿವು ನಮ್ಮ ಜನತೆಯ ದೊಡ್ಡ ಭಾಗಗಳನ್ನು ಕಾಡುತ್ತಿದೆ. ಜಾಗತಿಕ ಹಸಿವು ಸೂಚ್ಯಂಕದಲ್ಲಿ 199 ದೇಶಗಳಲ್ಲಿ ಭಾರತ 94ನೇ ಸ್ಥಾನದಲ್ಲಿದೆ.
- ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಅರ್ಧದಷ್ಟು ಮಕ್ಕಳು ಕಡಿಮೆ ತೂಕ ಅಥವಾ ಕುಂಠಿತ ಬೆಳವಣಿಗೆ ಹೊಂದಿದ್ದಾರೆ. ಶೇ.60 ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ
- ಭಾರತದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ದುಸ್ಥಿತಿಯಿಂದಾಗಿ,

  * ಪ್ರತಿ ವರ್ಷ ಸುಮಾರು 56 ಸಾವಿರ ಮಹಿಳೆಯರು ಹೆರಿಗೆಯಲ್ಲಿ ಸಾಯುತ್ತಾರೆ

  * 2012 ಒಂದೇ ವರ್ಷದಲ್ಲಿ ಸುಮಾರು 17 ಲಕ್ಷ ಐದು ವರ್ಷಕ್ಕಿಂತ

ಕಡಿಮೆ ವಯಸ್ಸಿನ ಮಕ್ಕಳು ನ್ಯೂಮೊನಿಯಾ, ಅತಿಸಾರದಂತಹ ತಡೆಗಟ್ಟಬಹುದಾದ ಕಾಯಿಲೆಗಳಿಂದ ಸತ್ತರು

- ಜನಗಣತಿಯ ಪ್ರಕಾರ ಇರುವ 33 ಕೋಟಿ ಕುಟುಂಬಗಳಲ್ಲಿ, ಶೇ. 57 ಕುಟುಂಬಗಳಿಗೆ ಸುರಕ್ಷಿತ ಕುಡಿಯುವ ನೀರಿನ ಸೌಕರ್ಯ ಇಲ್ಲ. ಶೇ. 53 ಕುಟುಂಬಗಳಿಗೆ ಶೌಚಾಲಯ ವ್ಯವಸ್ಥೆ ಇಲ್ಲ.
- ಭಾರತದ ಸ್ವಾತಂತ್ರ್ಯದ 66 ವರ್ಷಗಳ ನಂತರವೂ, ಶೆ. 26 ಜನತೆಗೆ ಸಾಕ್ಷರತೆಯ ಪ್ರಾಥಮಿಕ ಹಕ್ಕು ಸಹ ಲಭ್ಯವಿಲ್ಲ. ಇಂತಹ ನಿರಕ್ಷರರ ಪ್ರಮಾಣ ಚೀನಾದಲ್ಲಿ ಶೇ.4.1, ಶ್ರೀಲಂಕಾದಲ್ಲಿ ಶೇ. 9.1
- 2013ರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನ 135ನೇಯದು, 185 ದೇಶಗಳಲ್ಲಿ.

ಈ ಅಂಕೆಸಂಖ್ಯೆಗಳನ್ನು ಇನ್ನಷ್ಟು ವಿಶ್ಲೇಷಿಸಿದರೆ, ಜಾತಿ, ಸಮುದಾಯ ಮತ್ತು ಲಿಂಗದ ಆಧಾರದ ಮೇಲೆ ಇನ್ನೂ ಮುಂದುವರೆಯುತ್ತಿರುವ ಸಾಮಾಜಿಕ ಅಸಮಾನತೆಗಳಿಂದಾಗಿ, ದಲಿತ, ಆದಿವಾಸಿ ಮತ್ತು ಮಹಿಳೆಯರ ಸರಾಸರಿ ಸೂಚ್ಯಂಕಗಳು ಇನ್ನೂ ಕೆಳಮಟ್ಟದಲ್ಲಿ ಇವೆ. ಇದು ಇಮ್ಮಡಿ ದಮನ ಹಾಗೂ ತಿರಸ್ಕಾರಗಳನ್ನು ತೋರಿಸುತ್ತವೆ. ದಲಿತ ಆದಿವಾಸಿ ಮಹಿಳೆಯರಂತೂ ಮೂರು ಹಂತಗಳ ದಮನ ಹಾಗೂ ತಿರಸ್ಕಾರಗಳನ್ನು ಎದುರಿಸಬೇಕಾಗುತ್ತದೆ. ಉದಾಹರಣೆಗೆ ದಲಿತ ಮಹಿಳೆ ದಲಿತಳಾಗಿ, ಬಡ ಕುಟುಂಬದವಳಾಗಿ ಮತ್ತು ಮಹಿಳೆಯಾಗಿ ದಮನ ಹಾಗೂ ತಿರಸ್ಕಾರಗಳನ್ನು ಎದುರಿಸುತ್ತಾಳೆ.

ಈ ಅಂಕೆಸಂಖ್ಯೆಗಳು ಎರಡು ಭಾರತಗಳ ಕಟುವಾಸ್ತವದ ಕಿರುಚಿತ್ರಣ ಕೊಡುತ್ತವೆ. ಒಂದು ಶ್ರೀಮಂತರ ಭಾರತ–ಇಲ್ಲಿನವರ ಸಂಪತ್ತು ಜಾಗತಿಕ ಬಿಕ್ಕಟ್ಟಿನ ಅವಧಿಯಲ್ಲೂ, ಮಾಯವೋ ಎಂಬಂತೆ ಹೆಚ್ಚುತ್ತಲೇ ಹೋಗುತ್ತದೆ, ಇನ್ನೊಂದು ಬಡವರ ಭಾರತ – ಭಾರತದ ಬೆಳವಣಿಗೆಯ ದರ ಜೋರಾಗಿ ಏರುತ್ತಿದೆ ಎಂದು ಅವರಿಗೆ ಹೇಳಲಾಗುತ್ತಿದ್ದರೂ, ಇಲ್ಲಿನವರ ಜೀವನದ

ಗುಣಮಟ್ಟ ಕುಸಿಯುತ್ತಲೇ ಇರುತ್ತದೆ.

ಯಾವುದೋ ಮಾಯಾದಂಡ ಭಾರತ ಬಿಕ್ಕಟ್ಟಿನಲ್ಲಿದ್ದರೂ ಶ್ರೀಮಂತರನ್ನು ರಕ್ಷಿಸುತ್ತದೆ ಮತ್ತು ಭಾರತ ಸಮೃದ್ಧವಾಗಿದೆ ಎಂದು ಹೇಳುವಾಗಲೂ ಬಡವರ ಸ್ಥಿತಿಯನ್ನು ಕೆಡಿಸುತ್ತಲೇ ಇರುತ್ತದೆ.

ಕೆಲವೇ ಜನರ ಶ್ರೀಮಂತಿಕೆ ಭಾರೀ ಪ್ರಮಾಣದಲ್ಲಿ ಹೆಚ್ಚುವುದಕ್ಕೆ ಏನು ಕಾರಣ? ಕಾರ್ಪೊರೇಟುಗಳು ತಮ್ಮ ಸಂಪತ್ತನ್ನು ಹಲವು ಪಟ್ಟು ಹೆಚ್ಚಿಸಲು ಹೇಗೆ ಸಾಧ್ಯವಾಗುತ್ತದೆ? ಆದರೆ, ಶ್ರೀಸಾಮಾನ್ಯನಿಗೆ ಇದು ಸಾಧ್ಯವಾಗುವುದಿಲ್ಲ. ಯಾಕೆ? ಈ ಕಾರ್ಪೊರೇಟುಗಳು ಮತ್ತು ಸೂಪರ್ ಶ್ರೀಮಂತರು ಇತರ ದೇಶಗಳಲ್ಲಿ ಇರುವ ದರದಲ್ಲಿ, ಕನಿಷ್ಟ ತೆರಿಗೆಯಾದರೂ ಕೊಡುತ್ತಾರೊ? ಕೊಡುತ್ತಿದ್ದರೆ, ಕನಿಷ್ಟ ಜನತೆಯ ಕಲ್ಯಾಣ ಕ್ರಮಗಳಿಗೆ ಅವನ್ನು ಬಳಸಬಹುದಿತ್ತು.

**ಲಾಭದ ಸುರಿಮಳೆ/ಕಾರ್ಮಿಕರ ಶೋಷಣೆ**

ಕಾರ್ಪೊರೇಟುಗಳ ಲಾಭದ ಸುರಿಮಳೆಗೆ ಹಲವು ಕಾರಣಗಳು ಇರಬಹುದು. ಪ್ರಮುಖ ಕಾರಣಗಳಲ್ಲಿ ಒಂದು ಹೆಚ್ಚಿದ ಕಾರ್ಮಿಕರ ಶೋಷಣೆ. ಕಾರ್ಖಾನೆಗಳ ಕ್ಷೇತ್ರದಲ್ಲಿ ಸರಕುಗಳ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಸೇರಿಸಲಾದ ಒಟ್ಟು ಮೌಲ್ಯದಲ್ಲಿ ಕಾರ್ಮಿಕರ ಕೂಲಿಯ ಪಾಲು ಶೇ. 20ರಷ್ಟು ಕಡಿಮೆಯಾಗಿರುವುದು ಇದನ್ನು ಬಿಂಬಿಸುತ್ತದೆ. 1981–82ರಲ್ಲಿ ಈ ಪಾಲು ಶೇ. 30.28 ಇತ್ತು. 1992–93ರಲ್ಲಿ ಶೇ. 19.20ಕ್ಕೆ ಇಳಿದಿತ್ತು. 2010–11ರಲ್ಲಿ ಇದು ಕೇವಲ ಶೇ. 12.16ಕ್ಕೆ ಬಂದಿದೆ. ಕೂಲಿಯ ಪಾಲಿನ ಕುಸಿತದ ಜತೆ ಜತೆಗೆ ಉದ್ಯೋಗ–ರಹಿತ ಬೆಳವಣಿಗೆಯೂ, ರೂಪಾಯಿಯ ಮೌಲ್ಯವನ್ನು ಪರಿಗಣಿಸಿದರೆ ಕೂಲಿಯ ನಿಜಬೆಲೆ ಸ್ಥಗಿತಗೊಂಡಿದೆ ಅಥವಾ ಕುಸಿತಯುತ್ತಾ ಬಂದಿದೆ. ಹೀಗೆ ಕಾರ್ಮಿಕರ ಕೂಲಿಯಲ್ಲಿ ಕಡಿತ, ಬಂಡವಾಳಿಗರ ಲಾಭ ಹೆಚ್ಚಳದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾ ಬಂದಿದೆ. ಕಾಂಟ್ರಾಕ್ಟ್ (ಗುತ್ತಿಗೆ) ಮತ್ತು ಕ್ಯಾಶುವಲ್ (ಹಂಗಾಮಿ) ಕಾರ್ಮಿಕ ವ್ಯವಸ್ಥೆಯನ್ನು ವ್ಯಾಪಕವಾಗಿ ಜಾರಿಗೆ ತರುವ ಮೂಲಕ ಅವರಿಗೆ ಇದು ಸಾಧ್ಯವಾಗಿದೆ. ಸಂಘಟಿತ ಉದ್ದಿಮೆ

ವಲಯದಲ್ಲಿ ಸಹ ಅರ್ಧದಷ್ಟು ಖಾಯಂ ಸ್ವಭಾವದ ಉದ್ಯೋಗಗಳು, ಸಾರ್ವಜನಿಕ ಮತ್ತು ಖಾಸಗಿ ವಲಯ ಎರಡರಲ್ಲೂ ಯಾವುದೇ ಸವಲತ್ತುಗಳಿಲ್ಲದ ಕಾಂಟ್ರಾಕ್ಟೀಕರಣಕ್ಕೆ ಒಳಗಾಗಿವೆ. ಈ ಹೆಚ್ಚಿನ ಉತ್ಪಾದಕತೆ ಮತ್ತು ಕಡಿಮೆ ಕೂಲಿಯ ವ್ಯವಸ್ಥೆಯನ್ನು ಗಟ್ಟಿಗೊಳಿಸಲೆಂದೇ, ಬಿಜೆಪಿ ಮತ್ತು ಕಾಂಗ್ರೆಸ್ಸುಗಳು ಕಾರ್ಮಿಕರ ರಕ್ಷಣೆಯ ಕಾನೂನುಗಳನ್ನು ಕಿತ್ತು ಹಾಕುವ ತಥಾಕಥಿತ 'ಕಾರ್ಮಿಕ ಸುಧಾರಣೆ'ಗಳನ್ನು ಹೇಗಾದರೂ ಮುಂದೊತ್ತಲು ಪ್ರಯತ್ನಿಸುತ್ತಿವೆ. ಮೊದಲ ಯು.ಪಿ.ಎ. ಸರಕಾರದ ಅವಧಿಯಲ್ಲಿ ಎಸ್.ಇ.ಝಡ್. (ವಿಶೇಷ ಆರ್ಥಿಕ ವಲಯ)ಗಳಲ್ಲಿ ಮುಷ್ಕರ ಮತ್ತು ಟ್ರೇಡ್ ಯುನಿಯನ್ ಚಟುವಟಿಕೆ ನಷೇಧಿಸುವ ಕೇಂದ್ರ ಸರಕಾರದ ಪ್ರಯತ್ನವನ್ನು ಎಡ ಪಕ್ಷಗಳು ವಿರೋಧಿಸಿದವು ಮತ್ತು ತಡೆದವು. ಆದರೆ ಗುಜರಾತಿನಲ್ಲಿ ಮೋದಿ ಸರಕಾರ ಎಸ್.ಇ.ಝಡ್.ಗಳಲ್ಲಿ ಮುಷ್ಕರ ಮತ್ತು ಟ್ರೇಡ್ ಯುನಿಯನ್ ಚಟುವಟಿಕೆ ನಿಷೇಧಿಸುವ ನಿಯಮಗಳನ್ನು ಅಂಗೀಕರಿಸಿತು.

**ಲಾಭಗಳ ಸುರಿಮಳೆ/ನೈಸರ್ಗಿಕ ಸಂಪತ್ತುಗಳ ಲೂಟಿ**

ನವ-ಉದಾರವಾದಿ ನೀತಿಗಳು, ಖಾಸಗಿ ಹೂಡಿಕೆಯ ಆಧಾರದ ಮೇಲೆ ಮಾತ್ರ ಬೆಳವಣಿಗೆ ಸಾಧ್ಯ ಎಂಬ ತತ್ವದ ಮೇಲೆ ಆಧಾರಿತವಾಗಿವೆ. ಖಾಸಗಿ ಹೂಡಿಕೆಗೆ ಉದಾರೀಕರಣ ಮತ್ತು, ಭಾರೀ ರಿಯಾಯಿತಿಗಳು ಹಾಗೂ ಪ್ರೋತಾಹ ಅಗತ್ಯ ಎಂದು ಸರಕಾರದ ವಾದ. ಇದು ಸಂಪತ್ತಿನ ಕೇಂದ್ರೀಕರಣಕ್ಕೆ ಇನ್ನೊಂದು ಕಾರಣವಾಗಿದೆ. ಸರಕಾರ ಕಾರ್ಪೊರೇಟುಗಳೊಂದಿಗೆ "ಭಾರೀ ಬಾಡಿಗೆ" ಬರುವ –ಮೂಲ ಸೌಕರ್ಯ, ರೀಯಲ್ ಎಸ್ಟೇಟ್, ಗಣಿಗಾರಿಕೆ, ಭೂಮಿ ಮುಂತಾದ ಪ್ರಾಕೃತಿಕ ಸಂಪನ್ಮೂಲ– ಕ್ಷೇತ್ರಗಳಲ್ಲಿ ಶಾಮೀಲಾಗಿ, ಸಾರ್ವಜನಕ ಸಂಪನ್ಮೂಲಗಳನ್ನು ಬಳಸಲು ಬಿಟ್ಟಿದೆ. ಆ ಮೂಲಕ ಅವನ್ನು ಖಾಸಗಿ ಸಂಪತ್ತಾಗಿ ಪರಿವರ್ತಿಸಲು ಅವಕಾಶ ಮಾಡಿಕೊಟ್ಟಿದೆ.

ಈ ಕಾರಣದಿಂದಾಗಿಯೇ ಕೆ.ಜಿ.ಕಣಿವೆ ಅನಿಲ, 2ಜಿ, ಕಲ್ಲಿದ್ದಲು ಗಣಿ ಮತ್ತು ಹಲವಾರು ಭೂಸಂಬಂಧಿತ ಹಗರಣಗಳು ನಡೆದಿವೆ. ಈ

ವಿಧಾನಗಳಿಂದಲೇ– ಅಂದರೆ ತಮಗೆ ಸರ್ಕಾರದ ನೀತಿಯ ಪ್ರಕಾರವೇ ವಹಿಸಿಕೊಟ್ಟ ಪ್ರಾಕೃತಿಕ ಸಂಪನ್ಮೂಲಗಳ ಲೂಟಿಯ ಮೂಲಕವೇ– ಅಂಬಾನಿ, ಮಿತ್ತಲ್, ಟಾಟಾ ಮತ್ತಿತರರಿಗೆ ಲಾಭಗಳ ಸುರಿಮಳೆಯಾಗಿರುವುದು. ಮೋದಿ ಸರ್ಕಾರದ ಶಾಮೀಲಿನಿಂದಾಗಿಯೇ ಅದಾಣಿ ಗುಜರಾತಿನಲ್ಲಿ ಹಣ ಮಾಡಿಕೊಂಡಿರುವುದು. ಮುಂದ್ರಾ ಬಂದರು ಮತ್ತು ಮುಂದ್ರಾ ಎಸ್.ಇ.ಝಡ್. ಗಾಗಿ ದೊಡ್ಡ ಪ್ರಮಾಣದ ಭೂಮಿಯನ್ನು ಮೂರು ಕಾಸಿಗೆ ಪಡೆದುಕೊಂಡು ಭಾರಿ ಬೆಲೆಯ ರಿಯಲ್ ಎಸ್ಟೇಟ್ ಆಗಿ ಬೆಳೆಸಿ ಮಾರಿ ಸೂಪರ್ ಲಾಭ ಮಾಡಿಕೊಂಡಿರುವುದು.

ಆದರೆ ಲಾಭಗಳು ಮತ್ತು ಖಾಸಗಿ ಸಂಪತ್ತು ಹೆಚ್ಚಿದರೂ, ತೆರಿಗೆ ದರ ಹೆಚ್ಚಲಿಲ್ಲ.

**ತೆರಿಗೆಗಳೇ ಅಥವಾ ದಾನಗಳೇ ?**

ಭಾರತ ಅತಿ ಕಡಿಮೆ ಆದಾಯ ತೆರಿಗೆ ದರ ಇರುವ ದೇಶಗಳಲ್ಲಿ ಒಂದು. ಕಳೆದ ಎರಡು ದಶಕಗಳಲ್ಲಿ, ವ್ಯವಸ್ಥಿತವಾಗಿ, ತೆರಿಗೆಗಳನ್ನು ಕಡಿಮೆ ಮಾಡಲಾಗಿದೆ ಮತ್ತು ಸಾರ್ವಜನಿಕ ವೆಚ್ಚಗಳನ್ನು ಕಡಿತಗೊಳಿಸಲಾಗಿದೆ. ಭಾರತದಲ್ಲಿ ತೆರಿಗೆಗೂ ಜಿಡಿಪಿಗೂ ಇರುವ ಅನುಪಾತ, ಬೆಳೆಯುತ್ತಿರುವ ಆರ್ಥಿಕಗಳಲ್ಲೆ ಅತಿ ಕಡಿಮೆ. ಭಾರತದ ತೆರಿಗೆ ಜಿಡಿಪಿಯ ಶೇ.15 ಆಗಿದ್ದರೆ, ಬ್ರೆಜಿಲ್‌ದ್ದು ಶೇ. 24.5 ಮತ್ತು ದಕ್ಷಿಣ ಆಫ್ರಿಕಾದ್ದು ಶೇ. 26.5 ಇದೆ.

ಇಲ್ಲಿನ ಸರಕಾರಗಳು ವಿವಿಧ ನೇರ ತೆರಿಗೆಗಳನ್ನು ತೆಗೆದು ಹಾಕಿವೆ ಅಥವಾ ಕಡಿಮೆ ಮಾಡಿವೆ. ಸಂಪತ್ತು ತೆರಿಗೆ, ವಾರಸುದಾರಿಕೆ ತೆರಿಗೆ, ಬಳುವಳಿ ತೆರಿಗೆಗಳನ್ನು ತೆಗೆದು ಹಾಕಲಾಗಿದೆ. ಆದಾಯ ತೆರಿಗೆಯನ್ನು ಜಗತ್ತಿನಲ್ಲೇ ಅತ್ಯಂತ ಕಡಿಮೆ ಇಡಲಾಗಿದೆ. ಭಾರತದಲ್ಲಿ ಜಗತ್ತಿನಲ್ಲೇ ಅತ್ಯಂತ ವಿಲೋಮ (ಶ್ರೀಮಂತರು ಕಡಿಮೆ, ಬಡವರು ಹೆಚ್ಚು ತೆರಿಗೆ ಕೊಡುವ) ತೆರಿಗೆ ವ್ಯವಸ್ಥೆ ಜಾರಿಯಲ್ಲಿದೆ. ಶ್ರೀಮಂತರ ಮೇಲೆ ಹಾಕುವ ನೇರ ತೆರಿಗೆಗಳು ಒಟ್ಟು ತೆರಿಗೆಯ ಶೇ. 37.7 ಇವೆ. ಜಾಗತಿಕ ಬಂಡವಾಳಶಾಹಿಯ ಪವಿತ್ರ ಭೂಮಿ ಅಮೆರಿಕವನ್ನೇ

ತೆಗೆದುಕೊಳ್ಳಿ. ಅಲ್ಲಿ ನೇರ ತೆರಿಗೆಗಳು ಒಟ್ಟು ತೆರಿಗೆಯ ಶೇ. 75 ಇವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಭಾರತದ ಬಡವರು ತೆರಿಗೆಯ ಬಹುಪಾಲು ಭಾರ ಹೊತ್ತಿದ್ದಾರೆ–ಎಲ್ಲಾ ಜೀವನಾವಶ್ಯಕ ವಸ್ತುಗಳ ಮೇಲೆ (ಬೆಂಕಿ ಪೆಟ್ಟಿಗೆ, ಸೋಪು ಇತ್ಯಾದಿ) ಪರೋಕ್ಷ ತೆರಿಗೆಗಳನ್ನು ತೆರುವ ಮೂಲಕ.

**ಬಿಟ್ಟು ಕೊಟ್ಟ ತೆರಿಗೆಗಳ ಬಳುವಳಿ**

ಈ ಕಡಿಮೆ ಮಟ್ಟದ ತೆರಿಗೆಗಳನ್ನೂ ಕೂಡ ಸರಕಾರ ಸಂಗ್ರಹಿಸುತ್ತಿಲ್ಲ. ಒಂದಲ್ಲ ಒಂದು ನೆಪದ ಮೇಲೆ ಈ ತೆರಿಗೆಯನ್ನೂ ಇನ್ನಷ್ಟು ಕಡಿತ ಮಾಡಲಾಗುತ್ತಿದೆ ಅಥವಾ ರಿಯಾಯಿತಿ ಕೊಡಲಾಗುತ್ತಿದೆ. ವಾರ್ಷಿಕ ಬಜೆಟಿನಲ್ಲಿ ಇವು "ಬಿಟ್ಟುಕೊಟ್ಟ ತೆರಿಗೆಗಳು" ಎಂಬ ತಲೆಬರಹದಲ್ಲಿ ಬರುತ್ತವೆ. 2008–09ರಿಂದ 2012–13 ರವರೆಗೆ 5 ವರ್ಷದ ಅವಧಿಯಲ್ಲಿ ಕಾರ್ಪೊರೆಟ್ ವಲಯಕ್ಕೆ ಮತ್ತು ಶ್ರೀಮಂತ ವರ್ಗಗಳಿಗೆ ತೆರಿಗೆ ರಿಯಾಯಿತಿಗಳ ಮೂಲಕ ಒಟ್ಟು "ಬಿಟ್ಟು ಕೊಟ್ಟ ತೆರಿಗೆ" ರೂ. 23.64 ಲಕ್ಷ ಕೋಟಿ. ಅದೇ 5 ವರ್ಷಗಳಲ್ಲಿ ಬಿಟ್ಟುಕೊಟ್ಟ ಕೇಂದ್ರೀಯ ತೆರಿಗೆಗಳು: ರೂ. 4.14 ಲಕ್ಷ ಕೋಟಿ (2008–09), ರೂ. 5.02 ಲಕ್ಷ ಕೋಟಿ (2009–10), ರೂ. 4.6 ಲಕ್ಷ ಕೋಟಿ (2010–11), ರೂ. 5.34 ಲಕ್ಷ ಕೋಟಿ (2011–12), ರೂ. 5.74 ಲಕ್ಷ ಕೋಟಿ (2012–13).

ವಿವಿಧ ತೆರಿಗೆ ಮತ್ತಿತರ ರಿಯಾಯಿತಿಗಳನ್ನು ಪಡೆಯುತ್ತಲೇ, ಭಾರತದ ದೊಡ್ಡ ಉದ್ಯಮ ಕೂಟಗಳು ಬಂಡವಾಳ ಮತ್ತು ಉದ್ಯೋಗಗಳನ್ನು ರಫ್ತು ಮಾಡುವುದರಲ್ಲಿ ತೊಡಗಿದ್ದಾರೆ. ಯು.ಪಿ.ಎ. ಸರಕಾರ ವಿದೇಶ ನೇರ ಬಂಡವಾಳದ ಅಗತ್ಯದ ಬಗ್ಗೆ ಬೊಬ್ಬಿಡುತ್ತಿರುವಾಗಲೇ, ದೊಡ್ಡ ಪ್ರಮಾಣದಲ್ಲಿ ಬಂಡವಾಳ ದೇಶ ಬಿಟ್ಟು ವಿದೇಶಗಳಿಗೆ ಹೋಗುತ್ತಿದೆ. ಇದರರ್ಥ ರಿಯಾಯಿತಿ ಮತ್ತು ಸಬ್ಸಿಡಿಗಳನ್ನು ಕೊಡುವುದರಿಂದ ಅವರಿಂದ ದೇಶಕ್ಕೆ ಇನ್ನೂ ಹೆಚ್ಚಿನ ಹೂಡಿಕೆ ಪಡೆಯುವುದು ಸಾಧ್ಯವಾಗಿಲ್ಲ. ಈ ಕಾರ್ಪೊರೇಟುಗಳ ಲಾಭದ ಆಸೆ ಮತ್ತು ಹುಡುಕಾಟ, ಭಾರತದಲ್ಲಿ ಉದ್ಯೋಗ ಸೃಷ್ಟಿಸಬೇಕೆಂಬ ಯಾವುದೆ ಕಾಳಜಿಗಿಂತಲೂ ಹೆಚ್ಚಿನ ಆದ್ಯತೆ ಪಡೆಯುತ್ತದೆ.

**ಬಡವರಿಗೆ ಕಡಿತ**

ಸರಕಾರ ಒಂದು ಕಡೆ ಶ್ರೀಮಂತರಿಗೆ ಭಾರೀ ಸಬ್ಸಿಡಿಗಳನ್ನು ಕೊಡುತ್ತಿದೆ. ಇನ್ನೊಂದು ಕಡೆ ಜನರ ಜೀವನವನ್ನು ತಟ್ಟುವ ಆರೋಗ್ಯ, ಶಿಕ್ಷಣ, ಆಹಾರ ಭದ್ರತೆ, ನೀರಾವರಿ, ಗ್ರಾಮೀಣ ದೂರಸಂಪರ್ಕ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆ ಖರ್ಚುಗಳಿಗೆ ಇರುವ ಸಬ್ಸಿಡಿಗಳನ್ನು ಕಡಿತಗೊಳಿಸುತ್ತಿದೆ. ಇದು ಶ್ರೀಸಾಮಾನ್ಯನ ಜೀವನದಲ್ಲಿ ಬಿಕ್ಕಟ್ಟು ತಂದಿಟ್ಟಿದೆ. 2014–15ರ ಬಜೆಟಿನಲ್ಲಿ ಕಳೆದ ಬಜೆಟಿನ 28,650 ಕೋಟಿ ರೂ.ಗಳಷ್ಟು ಕಡಿತ ಮಾಡಲಾಗಿದೆ. ಗೊಬ್ಬರಗಳ ಸಬ್ಸಿಡಿ ಕಡಿತ ಮಾಡಿ ಗೊಬ್ಬರ ಬೆಲೆಗಳು ಏರಿರುವುದರಿಂದ, ಡೀಸೆಲ್ ಬೆಲೆ ಏರಿಕೆಯಿಂದಲೂ ರೈತರಿಗೆ ಭಾರೀ ಏಟು ಬಿದ್ದಿದೆ. ರೈತರ ಹೆಚ್ಚುತ್ತಿರುವ ದಾರುಣ ಆತ್ಮಹತ್ಯೆಗಳಿಗೆ ಸರಕಾರದ ನೀತಿಗಳೇ ಕಾರಣ.

**ಕೆಳಗೆ ತೊಟ್ಟಿಕ್ಕಿ ಬರುವ ಬುರುಡೆ ಸಿದ್ಧಾಂತ**

ಶ್ರೀಮಂತರನ್ನು ಇನ್ನಷ್ಟು ಆದಷ್ಟು ಬೇಗ ಶ್ರೀಮಂತರಾಗಲು ಸಹಾಯ ಮಾಡಬೇಕು. ಇದರಿಂದ ಹೆಚ್ಚಾದ ಸಂಪತ್ತಿನ ಒಂದು ಭಾಗ ಬಡವರಿಗೆ ಕೆಳಗೆ ತೊಟ್ಟಿಕ್ಕಿ ಬರುತ್ತದೆ. ಇದು ನವ–ಉದಾರವಾದದ ಸಿದ್ಧಾಂತ. ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಪೋರೇಟುಗಳಿಗೆ ಮಾನವ ಮತ್ತು ಪ್ರಾಕೃತಿಕ ಸಂಪತ್ತನ್ನು ಲೂಟಿ ಹೊಡೆಯಲು ಕುಮ್ಮಕ್ಕು ಕೊಡುವ ಸರಕಾರದ ನೀತಿಗಳಿಗೆ ಈ ಸಿದ್ಧಾಂತವೇ ಕವಚ. ಈ ಹಿಂದೆ ಕೊಟ್ಟಿರುವ ಅಸಹ್ಯ ಅಸಮಾನತೆಗಳ ಅಂಕೆಸಂಖ್ಯೆಗಳೇ ಈ ಸಿದ್ದಾಂತ ಎಷ್ಟು ದೊಡ್ಡ ಬುರುಡೆ ಎಂದು ಸಿದ್ಧ ಪಡಿಸುತ್ತದೆ. ಶ್ರೀಮಂತರು ಹೆಚ್ಚೆಚ್ಚು ಶ್ರೀಮಂತರಾಗುತ್ತಲೇ ಇರುತ್ತಾರೆ. ಬಡವರು ಬಡವರಾಗೇ ಇರುತ್ತಾರೆ. ನವ–ಉದಾರವಾದ ವ್ಯವಸ್ಥೆ ವಿನ್ಯಾಸವೇ ಹಾಗಿರುವುದರಿಂದ ಇದರಲ್ಲಿ ಆಶ್ಚರ್ಯವೇನಿಲ್ಲ.

ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಈ ಸಿದ್ದಾಂತವನ್ನು ಒಪ್ಪಿಕೊಳ್ಳುತ್ತವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಅಧಿಕಾರ ಸಿಕ್ಕಿದಾಗ ಅವು ಜಾರಿ

ಮಾಡಿದ್ದು ಈ ಬುರುಡೆ ಸಿದ್ಧಾಂತವನ್ನೇ. ಬಡವರ ಬಗ್ಗೆ ಶ್ರೀಮಂತರ ತಿರಸ್ಕಾರ ಬಿಟ್ಟು ಬೇರೇನೂ ಕೆಳಕ್ಕೆ ತೊಟ್ಟಿಕ್ಕುವುದಿಲ್ಲ. ಅಪಮಾನಗಳು, ಅವಮಾನಗಳು ಮತ್ತು ಅಗೌರವ ಬಿಟ್ಟರೆ ಇನ್ನೇನೂ ಕೆಳಗೆ ಹರಿದು ಬರುವುದಿಲ್ಲ.

ಕೆಳಕ್ಕೆ ತೊಟ್ಟಿಕ್ಕಿ ಬರುತ್ತದೆಂಬ ಸಿದ್ಧಾಂತವನ್ನು ಹಿಮ್ಮೆಟ್ಟಿಸಬೇಕಾಗಿದೆ. ಅದನ್ನು ಹಿಮ್ಮೆಟ್ಟಿಸಲು ಸಾಧ್ಯ. ಕಾರ್ಪೋರೇಟ್ ಲೂಟಿಯನ್ನು ಕೊನೆಗಾಣಿಸುವ ಒಂದು ಸರಕಾರ ಬೇಕಾಗಿದೆ. ಅದಕ್ಕಾಗಿ ಸೂಪರ್ ಶ್ರೀಮಂತರ ಮೇಲೆ ತೆರಿಗೆ ಹಾಕಬಲ್ಲ ಒಂದು ಸರಕಾರ ಬೇಕಾಗಿದೆ. ಅಸಮಾನತೆಗಳನ್ನು ಕಡಿಮೆ ಮಾಡಿ ಜನತೆಗೆ ನ್ಯಾಯ ಕೊಡುವ ಸರಕಾರ ಬೇಕಿದೆ. ಇದಕ್ಕೆ ದೊಡ್ಡಪ್ರಮಾಣದಲ್ಲಿ ಉದ್ಯೋಗ ನಿರ್ಮಾಣ ಮಾಡಬಲ್ಲ ಬೆಳವಣಿಗೆ, ಸಾರ್ವಜನಿಕ ಆರೋಗ್ಯ ಪಾಲನೆ, ಸಾರ್ವಜನಿಕೆ ಶಿಕ್ಷಣ, ಆಹಾರ ಭದ್ರತೆ, ಜನ–ಪರ ಮೂಲ ಸೌಕರ್ಯಗಳು–ಇವುಗಳಿಗೆ ಭಾರೀ ಒತ್ತು ಕೊಡುವ ಸರಕಾರ ಬೇಕಿದೆ. ಆಗ ಬೆಳವಣಿಗೆ ಮತ್ತು ಸಮಾನತೆ ಈ ಎರಡೂ ಉದ್ದೇಶಗಳು ಒಟ್ಟಿಗೇ ಸಾಧಿತವಾಗುತ್ತವೆ.

**ಭಾರತದಲ್ಲಿ ಸಮಾನತೆ ಮತ್ತು ನ್ಯಾಯ ತರಲು ನಿಮ್ಮ ಮತ ಬಳಸಿ !**

**ಒಂದು ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಬದಲಿಗಾಗಿ**

**ಸಿಪಿಐ(ಎಂ)ಗೆ ನಮ್ಮ ಮತ –ಎಡಶಕ್ತಿಗಳನ್ನು ಬೆಳೆಸಿ**

ಅನುವಾದ: **ವಸಂತ**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

## ಒಂದು ಜಾತ್ಯಾತೀತ ಮತ್ತು
## ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
## ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು    ಪ್ರತಿಗಳು: 3,000